VK
ವಿಜಯ ಕರ್ನಾಟಕ

**Sunday 26th September 2021, Page No.15**

**UPSC: RVCE Alumni Mamatha G Topper**

26/9/21

# ಎಂಜಿನಿಯರ್ ಕೆಲಸಕ್ಕೆ ಹೋಗಲಿಲ್ಲ

**ಜಿ. ಮಮತಾ** ಅವರು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕಿನ ದೇವಪುರ ಬೋವಿಹಟ್ಟಿ ಗ್ರಾಮದವರು. ಶಿಕ್ಷಕ ಗೋವಿಂದಪ್ಪ ಅವರ ಪುತ್ರಿಯಾದ ಮಮತಾ ಮೊದಲೆರಡು ಪ್ರಯತ್ನದಲ್ಲಿ ವಿಫಲಗೊಂಡವರು. ಮೂರನೇ ಪ್ರಯತ್ನದಲ್ಲಿ ಮುಖ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸಂದರ್ಶನದಲ್ಲಿಯೂ ಉತ್ತಮ ಅಂಕಪಡೆದು ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.




1ರಿಂದ 4ನೇ ತರಗತಿ ವರೆಗೆ ದೇವಪುರ ಬೋವಿಹಟ್ಟಿ ಗ್ರಾಮ ಶಾಲೆ, 5ರಿಂದ 10ರವರೆಗೆ ಹೊಸದುರ್ಗ ಪಟ್ಟಣದ ಸೆಂಟ್ ಜೋಸೆಪ್ ಶಾಲೆ, ಶಿವಮೊಗ್ಗ ಖಾಸಗಿ ಕಾಲೇಜಿನಲ್ಲಿ ಪಿಯುಸಿ ಓದಿದ್ದಾರೆ. ಬೆಂಗಳೂರಿನ ಆರ್‌ವಿ ಕಾಲೇಜಿನಲ್ಲಿ ಬಿಇ ಸಿವಿಲ್ ಎಂಜಿನಿಯರಿಂಗ್ ಪದವಿ ಪೂರೈಸಿದ್ದಾರೆ. ಎಂಜಿನಿಯರಿಂಗ್ ನಂತರ ಕೆಲಸಕ್ಕೆ ಹೋಗದೇ ಐಎಎಸ್ ಪರೀಕ್ಷೆಗೆ ಸಿದ್ಧತೆ ನಡೆಸಿ ರ್ಯಾಂಕ್ ಪಡೆದಿದ್ದಾರೆ.

''ಗಂಟೆಗಳ ಆಧಾರದಲ್ಲಿ ಅಧ್ಯಯನದ ಮೇಲೆ ಗಮನ ಹರಿಸದೇ ವಿಷಯ ಆಧಾರದ ಮೇಲೆ ಅಭ್ಯಾಸ ನಡೆಸುತ್ತಿದ್ದೆ. ದಿನಕ್ಕೆ 8ರಿಂದ 10 ಗಂಟೆಗಳ ಕಾಲ ಪರೀಕ್ಷೆಗೆ ತಯಾರಿ ನಡೆಸಿ ಅಧ್ಯಯನ ಮಾಡುತ್ತಿದ್ದೆ. ನನ್ನ ಸ್ಟ್ರೆಂತ್ ಮತ್ತು ವೀಕ್‌ನೆಸ್ ಏನು ಎಂಬುದನ್ನು ತಿಳಿದು ಅಧ್ಯಯನ ನಡೆಸಿದ್ದೇನೆ. ಬೆಂಗಳೂರಿನಲ್ಲಿ ಒಂದು ವರ್ಷ ಕೋಚಿಂಗ್ ಪಡೆದ ನಂತರ ಮನೆಯಲ್ಲಿಯೇ ಸ್ವಯಂ ಅಧ್ಯಯನ ಮಾಡಿದೆ,'' ಎನ್ನುತ್ತಾರೆ ಮಮತಾ.